ಇದ್ದೇವೆ. ಮತ್ತು ಜವಾಹರ್ ರೋಜ್‌ಗಾರ್ ಯೋಜನೆಗೆ ನಾವು ಹಣವನ್ನು ವಿತ್‌ಹೆಲ್ಡ್ ಮಾಡುವ ಪ್ರಶ್ನೆಯೇ ಬರಲ್ಲ, ಈ ಯೋಜನೆಯಲ್ಲಿ ಏನು ಹಣ ಬರುತ್ತದೆ ಅದನ್ನು ಸಂಪೂರ್ಣವಾಗಿ ನಾವು ಬಿಡುಗಡೆ ಮಾಡುತ್ತೇವೆ.

ಶ್ರೀ ಸಾದತ್ ಅಲಿಖಾನ್:- ಚನ್ನಪಟ್ಟಣ ವಿಚಾರದಲ್ಲಿ ಸ್ಕೇರ್‌ಸಿಟಿ ವರ್ಕ್ಸ್‌ನಲ್ಲಿ ಬೋರ್‌ವೆಲ್‌ಗೆ ನಾವು ರಿಕ್ವಿಸಿಷನ್ ಕೊಟ್ಟಿದ್ದೇವೆ. ಪೆಂಡಿಂಗ್ ಇಲ್ಲಾ ಎಂದು ತಾವು ಕೊಟ್ಟಿದ್ದೀರಿ. 25 ಬೋರ್‌ವೆಲ್ಸ್ ಬೇಕು ಎಂದು ನಾವು ಕೇಳಿದ್ದೇವೆ, ಅದನ್ನು ಯಾವಾಗ ಮಾಡಿಕೊಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಚನ್ನಪಟ್ಟಣಕ್ಕೆ ಕೂಡ ನಾವು ಹಣ ರಿಲೀಸ್ ಮಾಡಿದ್ದೇವೆ. ಸುಮಾರು 3 ವರ್ಷಗಳಲ್ಲಿ 18 ಲಕ್ಷ 61 ಸಾವಿರದ 620 ರೂಪಾಯಿ ಗಳನ್ನು ಈ ಬೋರ್‌ವೆಲ್ ಸ್ಕೀಮಿಗೋಸ್ಕರ ನಾವು ರಿಲೀಸ್ ಮಾಡಿದ್ದೇವೆ.

ಶ್ರೀ ಸಾದತ್ ಅಲಿಖಾನ್:- ನಾವು 25 ಬೋರ್‌ವೆಲ್ ಬೇಕೆಂದು ಕೇಳಿದ್ದೆವು, ಅದು 6 ತಿಂಗಳಿನಿಂದ ಪೆಂಡಿಂಗ್ ಇದೆ. ಇದನ್ನು ಯಾವಾಗ ಮಾಡಿಕೊಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಮತ್ತೆ ಅಡಿಶನಲ್ ಆಗಿ ಇನ್ನೂ 25 ಬೋರ್‌ವೆಲ್ ಕೂಡಿ ಎಂದು ಕೇಳುತ್ತಿದ್ದಾರೆ. ಅದು ಪೆಂಡಿಂಗ್‌ನಲ್ಲಿವೆ ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ, ಹಣ ಬಂದಾಗ ಅದನ್ನು ಹೊತ ಹಂಚವಾಗಿ ಕೊಡೋಣ.

## ಕೃಷಿ ವಿಶ್ವವಿದ್ಯಾಲಯದಲ್ಲಿ ಮುಖ್ಯ ಹುದ್ದೆಗಳ ಭರ್ತಿ.

142 (1130) ಡಾ. ಜಿ. ಪರಮೇಶ್ವರ್ (ಮಧುಗಿರಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮುಖ್ಯ ಅಧಿಕಾರಿಗಳ ಹುದ್ದೆಗಳನ್ನು ಕಳೆದ ಅನೇಕ ವರ್ಷಗಳಿಂದ ಭರ್ತಿ ಮಾಡದೆ ಇರುವುದು ನಿಜವೇ,

ಆ) ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ,

ಇ) ಇದು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ಅಬಿವೃದ್ಧಿ ಮತ್ತು ಸಂಶೋಧನಾ ಕಾರ್ಯಕ್ರಮಗಳ ಮೇಲೆ ಪರಿಣಾಮ ಉಂಟು ಮಾಡುವುದಿಲ್ಲವೇ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

(ಅ) ಹೌದು

(ಆ) ಎರಡರಿಂದ ಐದು ವರ್ಷಗಳು

(ಇ) ದಿನನಿತ್ಯದ ಕೆಲಸಕಾರ್ಯಗಳು ಸುಗಮವಾಗಿ ನಡೆಯುವಂತೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ.

(ಈ) ಮುಖ್ಯ ಹುದ್ದೆಗಳನ್ನು ಬೇಗನೆ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಡಾ. ಜಿ. ಪರಮೇಶ್ವರ್:- ಮಾನ್ಯ ಅಧ್ಯಕ್ಷರೆ ನನಗೆ ಒದಗಿಸಿರತಕ್ಕಂಥ ಉತ್ತರದಲ್ಲಿ ಏನು ಟ್ರಾನ್ಸ್‌ಲೇಶನ್ ಮಾಡಿದ್ದಾರೆ ಅದರಲ್ಲಿ ಒಂದು ತಪ್ಪಾಗಿದೆ.

" Whether it is a fact that key officers posts have not been filled up in the U.A.S. Bangalore for the last seven years?" ಅಂತ ಕೇಳಿದ್ದಕ್ಕೆ The answer is "Yes" ಎಂದು ಹೇಳಿದ್ದಾರೆ. ಆದರೆ ಕನ್ನಡದಲ್ಲಿ 7 ವರ್ಷ ಎನ್ನುವುದನ್ನು ಬಿಟ್ಟುಬಿಟ್ಟಿದ್ದಾರೆ ಕನ್ನಡದಲ್ಲಿ ಕಳೆದ ಅನೇಕ ವರ್ಷಗಳಿಂದ ಭರ್ತಿ ಮಾಡದೇ ಇರುವುದು ಎಂದು ಹೇಳಿದ್ದಾರೆ. ಇದನ್ನೇ ನಾವು ನೋಡಿದರೆ 7 ವರ್ಷ ನಾವು ಫಿಲಪ್ ಮಾಡಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ ಮಾನ್ಯಮಂತ್ರಿಗಳನ್ನು ನಾನು ಕೇಳುತ್ತಿರುವುದು 7 ವರ್ಷಗಳಿಂದ

ಈ ಹುದ್ದೆಗಳನ್ನು ಏತಕ್ಕೆ ಭರ್ತಿ ಮಾಡಿಲ್ಲವೆಂದು ಯಾವುದೇ ಒಂದು ಅಕಾಡೆಮಿಕ್ ಇನ್ಸ್‌ಟ್ಯೂಷನಲ್ಲಿ ಒಂದು ಟೀನ್ ಪೋಸ್ಟ್ ಅನ್ನು ಆಗಲಿ ಅಥವಾ ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ 5 ಪೋಸ್ಟ್‌ಗಳು ಎಂದರೆ ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್ ಇನ್ ಅಗ್ರಿಕಲ್ಚರ್, ವೆಟ್ರಿನರಿ, ಮತ್ತು ಫಿಶರೀಸ್ ಬೇರೆ ಬೇರೆ ಇಲಾಖೆಗಳಿಗೆ ಎಂದು ಇದೆ. ಇದು ಫ್ಯೂಚ್ರಿ ರಿಸರ್ಚ್ ವಿಶ್ವವಿದ್ಯಾನಿಲಯ ಆಗಿರುವುದರಿಂದ ಕಳೆದ 7ವರ್ಷಗಳಿಂದ ಈ ಹುದ್ದೆಗಳನ್ನು ಏತಕ್ಕೋಸ್ಕರ ಫಿಲಪ್ ಮಾಡಿಲ್ಲ ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎನ್. ಚಿಕ್ಕೇಗೌಡ:- 7 ವರ್ಷ ಎಂಬು ಮಾನ್ಯ ಸದಸ್ಯರು ಹೇಳತಕ್ಕಮ್ದು ಸತ್ಯಕ್ಕೆ ದೂರವಾದುದು. 1987-88, 1988-89, 1989-90, 1990-91 ಈ 4 ವರ್ಷಗಳಲ್ಲಿ ಕೆಲವು ಹುದ್ದೆಗಳನ್ನು ತುಂಬಿಲ್ಲ. ಅವುಗಳು ಸ್ವತಂತ್ರವಾಗಿ ಕೆಲಸವನ್ನು ನಿರ್ವಹಿಸುವುದಕ್ಕೆ ಬೇರೆ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು 7 ವರ್ಷ ಎಂದು ಏನು ಹೇಳುತ್ತಿದ್ದಾರೆ ಅದು ಸತ್ಯಕ್ಕೆ ದೂರವಾದುದು.

ಡಾ. ಜಿ. ಪರಮೇಶ್ವರ:- ಮಾನ್ಯ ಅಧ್ಯಕ್ಷರೇ, ಇದಕ್ಕೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ, ಏಕೆಂದರೆ ನಾನು ಪ್ರಶ್ನೆಯನ್ನು ಕೇಳಿರತಕ್ಕದ್ದು

"Whether it is a fact that key officers posts have not been filled in the U.A.S. Bangalore, for the last 7 Years?"

ಎಂದು ನಾನು ಕೇಳಿರುವುದಕ್ಕೆ "Yes" ಎಂದು ಅವರೇ ಉತ್ತರದಲ್ಲಿ ಹೇಳಿದ್ದಾರೆ. ಬೇಕಾದರೆ ತಾವೇ ಈ ಉತ್ತರವನ್ನು ತರಿಸಿಕೊಂಡು ನೋಡಬಹುದು. "Yes" ಎಂದು ಹೇಳಿ ಈಗ ಇದು ಸತ್ಯಕ್ಕೆ ದೂರವಾಮದೆಂದು ಹೇಳುತ್ತಿದ್ದಾರೆ. ಹಾಗಾದರೆ ಸತ್ಯ ಯಾವುದು ಎಂಬುದನ್ನು ನಾನು ಕೇಳಬೇಕಾಗುತ್ತದೆ. ಸತ್ಯಕ್ಕೆ ಇದು ಎಷ್ಟು ದೂರ ಇದೆ ಎಂಬುದನ್ನು ತಾವೇ ಹೇಳಬೇಕು. 7 ವರ್ಷ ದೂರವಾಗಿದೆಯೋ ಅಥವಾ 10 ವರ್ಷ ದೂರವಾಗಿದೆಯೋ ಎಂಬುದನ್ನು ಹೇಳಬೇಕು.

ಅಧ್ಯಕ್ಷರು:- ಎಷ್ಟು ದೂರ ಎಂಬುದಕ್ಕೆ ಚಿಳತೆ ಮಾಡಿಸಲು ಒಂದು ಗಜಕಡ್ಡಿಯನ್ನು ನಾನು ತರಿಸುತ್ತೇನೆ ಇರಿ.

ಶ್ರೀ ಎನ್.ಚಿಕ್ಕೇಗೌಡ:- ಸ್ವಾಮಿ, ಅದು ಸೆವೆಗಲ್ ಎಂದು ಇರಬೇಕಾಗಿತ್ತು. ಆದರೆ ಸೆವೆನ್ ಇಯರ್ಸ್ ಎಂದು ತಪ್ಪಾಗಿ ಬಿದ್ದಿದೆ.

ಡಾ. ಜಿ. ಪರಮೇಶ್ವರ:- ಇನ್ನು ಎರಡನೆಯ ಪ್ರಶ್ನೆಗೆ ಉತ್ತರ ಹೇಳಿದ್ದಾರೆ, 2 ರಿಂದ 5 ವರ್ಷಗಳು ಎಂದು. ಇದು ಸತ್ಯಕ್ಕೆ ದೂರವಾಗಿರತಕ್ಕದ್ದು. ಎಷ್ಟು ಹತ್ತಿರ ಬಂದಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎನ್. ಚಿಕ್ಕೇಗೌಡ:- 1988ರಿಂದ 92ರವರೆಗೆ ಕೆಲವು ಹುದ್ದೆಗಳನ್ನು ತುಂಬಿಲ್ಲ, ಯಾವ ಯಾವ ಹುದ್ದೆಗಳು ಎಂಬುದನ್ನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಅಥವಾ ವಿವರಗಳನ್ನು ಕಳುಹಿಸಿಕೊಡಿ ಎಂದರೆ ಅವರಿಗೆ ಕಳುಹಿಸಿಕೊಡುತ್ತೇನೆ. ಅವರು ಹೇಳಿದಂತೆ ಹಿಂದೆ ಅಲ್ಲಿ ಡೀನ್ ಆಗಿದ್ದವರು 1-10-89 ರಂದು ವೈಸ್ ಛಾನ್ಸಲರ್ ಆಗಿ ಹೋದರು. ಮತ್ತೊಂದು ಸಂಶೋಧನಾ ನಿರ್ದೇಶಕರು ತಾ॥ 23-2-89 ರಿಂದ, ವಿಸ್ತರಣಾ ನಿರ್ದೇಶಕರು 1-5-88ರಿಂದ, ಹೀಗೆ ನನ್ನ ಹತ್ತಿರ ವಿವರಗಳಿವೆ. ಇದನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ. ಈ ರೀತಿ ದೊಡ್ಡ ದೊಡ್ಡ ಹುದ್ದೆಗಳು 1988ರಿಂದ ಖಾಲಿ ಇವೆ. ಅದಕ್ಕೂ ಬೇರೆ ವ್ಯವಸ್ಥೆ ಮಾಡಿ ಅವರು ಸ್ವತಂತ್ರವಾಗಿ ಕೆಲಸ ನಿರ್ವಹಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇದಕ್ಕೆ ಕಾರಣ ಇದು ರೋಸ್ಟರ್‌ಗೆ ಬರುತ್ತದೆಯೇ ಇಲ್ಲವೊ ಎಂಬ ಪ್ರಶ್ನೆ ಬಂತು. ಆಗ ನಾವು ಸರ್ಕಾರದಿಂದ ನಿರ್ದೇಶನ ಕೂಛ್ಪೆವು. ಇದು ಕೇ ಪೋಸ್ಟ್. ಇದು ರೋಸ್ಟರ್‌ಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನ ಡಿಸಿಷನ್‌ನ್ನು ಸರ್ಕಾರ ತರಿಸಿಕೊಂಡಿದೆ. ಅದನ್ನು ಸಂಪೂರ್ಣವಾಗಿ ಪರಿಶೀಲಿಸಿದ್ದೇವೆ. ಈಗ ಇದು ರೋಸ್ಟರ್‌ಗೆ ಬರುವುದಿಲ್ಲವೆಂದು ಹೇಳುವುದರಿಂದ ಆ ಹುದ್ದೆಗಳನ್ನು ತುಂಬಬೇಕೆಂದು ನಾವು 18-7-91 ರಲ್ಲಿ ತಿಳಿಸಿದ್ದೇವೆ. ಅದಾದಮೇಲೆ ಅವರು 4-11-91 ರಲ್ಲಿ ಅವರ ಸಭೆಯಲ್ಲಿ ಈ ವಿಷಯವನ್ನು ಮುಂದೂಡಿದ್ದಾರೆ. ಈ ಪೋಸ್ಟ್‌ಗಳನ್ನು ತುಂಬಲು 1939ರ ಆಗಸ್ಟ್, ಸಪ್ಟೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಸಂದರ್ಶನ ಕೂಡ ನಡೆದಿದೆ. ಮಾನ್ಯ ಸದಸ್ಯರು ಹಿಂದೆ ಬೋರ್ಡ್ ಆಫ್ ರಿಜಿಂಟ್ ಕೂಡ ಆಗಿದ್ದರು. ಆದುದರಿಂದ ಅವರಿಗೆ ಈ ವಿಚಾರದಲ್ಲಿ ಹೆಚ್ಚಿನ ವಿಚಾರ ಗೊತ್ತಿದೆ. ನಾನು ಸತ್ಯಕ್ಕೆ ದೂರವಾದ ಯಾವುದೇ ವಿಷಯವನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಡಿಸಿಷನ್ ಬಂದಿರುವುದರಿಂದ ನಾವು 18-7-91ರಲ್ಲಿ ಒಂದು ಪತ್ರವನ್ನು ಬರೆದು ಈ ಹುದ್ದೆಗಳನ್ನು

ತುಂಬಿ ಎಂದು ಹೇಳಿದ್ದೇವೆ. ನಾನು ಈಗಾಗಲೇ ಹೇಳಿದಂತೆ 4-11-91 ರಂದು ನಡೆದ ಅವರ ಬೋರ್ಡ್ ಮೀಟಿಂಗ್‌ನಲ್ಲಿ ಈ ವಿಷಯವನ್ನು ಮುಂದೂಡಿದ್ದಾರೆ. ಈಗ ಅವರಿಗೆ ಸೂಕ್ತವಾದ ಒಂದು ಪತ್ರವನ್ನು ಬರೆದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇವೆ.

ಡಾ. ಜಿ. ಪರಮೇಶ್ವರ:- ನಾನೂ ಕೂಡ 1986ರಿಂದ 91ರವರೆಗೆ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಲಿಯ ಸದಸ್ಯನಾಗಿ ಕೆಲಸಮಾಡಿದ್ದೇನೆ. ನಾವು ಇದ್ದಾಗ ಒಂದು ನಿರ್ಣಯವನ್ನು ತೆಗೆದುಕೊಂಡು ರೋಸ್ಟರ್‌ನ್ನು ಫಾಲೋ ಮಾಡಬೇಕೆಂದು ಮಾಡಿದ್ದೇವೆ. ಡೈರೆಕ್ಟರ್ ಆಫ್ ಇನ್‌ಸ್ಟ್ರಕ್ಷನ್ ಒಂದು ಗ್ರೂಪ್ ಆಫ್ ಪೋಸ್ಟ್, ಅದರಲ್ಲಿ ಫಿಶರೀಸ್ ಬರಬಹುದು, ಅಗ್ರಿಕಲ್ಚರ್ ಬರಬಹುದು, ವೆಟರಿನರಿ ಬರಬಹುದು ಅಥವಾ ಹಾರ್ಟಿಕಲ್ಚರ್ ಬರಬಹುದು. It is a group of posts. ತಾವು ಏನು ಸುಪ್ರೀಂ ಕೋರ್ಟ್‌ನ ಡಿಸಿಷನ್ಸ್‌ನ್ನು ರೆಫರ್ ಮಾಡುತ್ತಿದ್ದೀರಿ ಆ ನಿರ್ಣಯದಲ್ಲಿ ಕೀ ಪೋಸ್ಟ್‌ಗಳಿಗೆ ಅದರಲ್ಲೂ ಕೃಷಿ ವಿಶ್ವವಿದ್ಯಾಲಯದಲ್ಲಿ ಡೈರೆಕ್ಟರ್ ಪೋಸ್ಟ್‌ಗೆ ಕೊಡಕೂಡದೆಂಬ ನಿರ್ಣಯ ಏನೂ ಇಲ್ಲ, ಹಾಗೇನಾದರೂ ಸುಪ್ರೀಂ ಕೋರ್ಟ್‌ನ ಡೈರೆಕ್ಷನ್ ಇದ್ದಿದ್ದರೆ ಇಷ್ಟು ವರ್ಷಕಾಲ ಈ ಸುಪ್ರೀಂ ಕೋರ್ಟ್‌ನ ನಿರ್ಣಯಕ್ಕೆ ಬೆಲೆಕೊಟ್ಟು ಆ ಪೋಸ್ಟ್‌ನ್ನು ಫಿಲಪ್ ಮಾಡಬೇಕಾಗಿತ್ತು. 5 ವರ್ಷದವರೆಗೂ ಒಂದು ಅಕೆಡೆಮಿಕ್ ಇನ್‌ಸ್ಟಿಟ್ಯೂಷನ್‌ನಲ್ಲಿ ಪ್ರೋಸ್ಟ್‌ಗಳನ್ನು ಖಾಲಿ ಇಟ್ಟುಕೊಳ್ಳುವುದರಿಂದ ರೀಸರ್ಚ್ ಕೆಲಸವಾಗಲಿ, ಎಕ್ಸ್‌ಟೆನ್‌ಷನ್ ಕೆಲಸವಾಗಲಿ, ಟೀಚಿಂಗ್ ಕೆಲಸವಾಗಲಿ ಸಫರ್ ಆಗುವುದಿಲ್ಲವೇ ಎಂಬುದನ್ನು ನಾನು ಕೇಳಬೇಕಾಗುತ್ತದೆ.

ಶ್ರೀ ಎನ್. ಚಿಕ್ಕೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಡಿಸಿಷನ್‌ನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟು ಅವರಿಂದ ಒಪೀನಿಯನ್ ಪಡೆದು ತದನಂತರವೇ ಸರ್ಕಾರದವರು ಅವರಿಗೆ ಪತ್ರ ಬರೆದು ತಿಳಿಸಿದೆವು ನೀವು ಈ ಪೋಸ್ಟ್‌ಗಳನ್ನು ಭರ್ತಿ ಮಾಡಿ ಎಂದು ಹೇಳಿದರೂ ಅವರು ಮಾಡಲಿಲ್ಲ, ಅವರೇ 4-11-91ರಲ್ಲಿ ಮುಂದಕ್ಕೆ ಹಾಕಿ ಬಿಟ್ಟಿದ್ದಾರೆ. ಆದ್ದರಿಂದ ಮತ್ತೆ ಅವರಿಗೆ ತಿಳಿಸಿ. ಈಗ ನಾವು ಸ್ವತಂತ್ರವಾಗಿ ನಿರ್ವಹಣೆ ಮಾಡಲಿಕ್ಕೆ ಬೇರೆ ಹಂತದಲ್ಲಿ ಎಲ್ಲಿ ಖಾಲಿ ಇದೆಯೋ ಅವುಗಳಿಗೆಲ್ಲ ಕೆಲಸ ಮಾಡುವುದಕ್ಕೆ ಬೇರೆಯವರನ್ನು ಹಾಕಿ ಇನ್‌ಚಾರ್ಜ್ ಮಾಡಿದ್ದೇವೆ. ಆದ್ದರಿಂದ ಕೆಲಸ ಎಲ್ಲೂ ಸಫರ್ ಆಗಿಲ್ಲ, ಮತ್ತೆ ಈಗ ಮಾನ್ಯ ಸದಸ್ಯರು ಹೇಳತಕ್ಕಂಥದ್ದು ಅವರ ಅಭಿಪ್ರಾಯ. ಅದರಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಡಾ. ಜಿ. ಪರಮೇಶ್ವರ :- ಮಾನ್ಯ ಅಧ್ಯಕ್ಷರೇ ಇಷ್ಟು ದಿವಸಗಳಲ್ಲಿ ಆ ಪೋಸ್ಟ್‌ಗಳನ್ನು ಫಿಲಪ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ:- ಆದಷ್ಟು ಜಾಗ್ರತೆ ಮಾಡುತ್ತೇವೆ, ಆದರೆ ದಿನಾಂಕ ಮತ್ತು ಗಂಟೆ ಹೇಳಲಿಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು:- ಪೋಸ್ಟ್‌ಗಳನ್ನು ತುಂಬುವವರು ಅಗ್ರಿಕಲ್ಚರ್ ಯೂನಿವರ್ಸಿಟಿಯವರು.

ಡಾ. ಜಿ. ಪರಮೇಶ್ವರ:- ಇಂಟರ್‌ವ್ಯೂ ಆಗಿದೆ, ಬೋರ್ಡ್‌ನಲ್ಲಿ ಪ್ಯಾನಲ್ ಕೂಡ ಇಟ್ಟಿದ್ದಾರೆ ಸರ್ಕಾರದವರು ಈಗ ಕೇಳಿಕೊಂಡಿರುವ ಇಷ್ಟು ಪೋಸ್ಟ್‌ಗಳನ್ನು ರೋಸ್ಟರ್ ಫಾಲೋ ಮಾಡಿ ಫಿಲಪ್ ಮಾಡಬೇಕೇ ಬೇಡವೇ ಎನ್ನುವುದರ ಬಗ್ಗೆ ಸರ್ಕಾರಕ್ಕೆ ಕೇಳಿದ್ದಾರೆ "Yes" ಅಥವಾ "No" ಎಂದು ಹೇಳಿದರೆ ಫಿಲಪ್ ಮಾಡುತ್ತಾರೆ.

ಅಧ್ಯಕ್ಷರು:- ಈಗ ನೋ ಎಂದು ಹೇಳಿದ್ದಾರಲ್ಲಾ.

ಡಾ. ಜಿ. ಪರಮೇಶ್ವರ್:- ಫಿಲಪ್ ಮಾಡಬಾರದೆಂದು ಹೇಳಿದ್ದಾರೆ.

MR. SPEAKER:-If I have understood the Minister correctly, he has said that he has referred the Supreme Court or High Court decision to the opinion of the Law Secretariat, and on the basis of that they have already conveyed to the Agriculture University that this does not ..... Whatever it is.

ಡಾ. ಜಿ. ಪರಮೇಶ್ವರ:- ವಿಳಂಬವಾಗಬಾರದು, ಈಗಲಾದರೂ ಆಶ್ವಾಸನೆಯನ್ನು ಕೊಡಬೇಕು.

ಅಧ್ಯಕ್ಷರು:- ಫಿಲಪ್ ಮಾಡುತ್ತೇವೆಂದು ಹೇಳಿದ್ದಾರೆ.